**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ**
**ಚಿಂಚೋಳಿ**

**ಸಿ. ಸಿ. ನಂ. *1033/2022***

**ಫಿರ್ಯಾದಿ** : ಸರ್ಕಾರದ ಪರವಾಗಿ ಚಿಂಚೋಳಿ ಪೋಲೀಸರು.

- ವಿರುದ್ದ -

**ಆರೋಪಿತರು** :

1. ಈರಮ್ಮ ಗಂಡ ದೇವಿಂದ್ರಪ್ಪ ಹಿರೆಮನಿ, 69 ವರ್ಷ, ಉಃ ಮನೆ ಕೆಲಸ.
2. ವಿದ್ಯಾಸಾಗರ ತಂದೆ ನಾಗೇಂದ್ರಪ್ಪ ಹಿರೆಮನಿ, 29 ವರ್ಷ, ಉಃ ಪ್ರಾವೇಟ ಕೆಲಸ.

ಇಬ್ಬರ ವಾಸಃ ಐನೋಳ್ಳಿ ಗ್ರಾಮ, ತಾಃ ಚಿಂಚೋಳಿ.

***ಃಃದೋ ಷಾ ರೋ ಪ ಣೆಃಃ***

ನಾನು ಶ್ರೀ **ರವಿಕುಮಾರ ವಿ. ಬಿ.ಎ.ಎಲ್.ಎಲ್‌ಎಲ್.ಬಿ.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ,

ದಿನಾಂಕಃ 28-11-2022 ರಂದು 06-00 ಗಂಟೆಯ ಸಮಯದಲ್ಲಿ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಐನೋಳ್ಳಿ ಗ್ರಾಮದಲ್ಲಿ ಚಾಸಾ-1 ಬಿಸ್ಮಿಲ್ಲಾ ಮತ್ತು ಚಾಸಾ-4 ಶೇರ ಅಲಿ ನೇದ್ದವರು ಶೇರಿ ಹಾಳದಲ್ಲಿ ಸುಮಾರು ವರ್ಷಗಳ ಹಿಂದೆ ಖರೀದಿ ಮಾಡಿರುವ ಖುಲ್ಲಾ ಜಾಗೆಯಲ್ಲಿ ಮನೆ ಕಟ್ಟಡ ಕಟ್ಟುತಿರುವಾಗ ಆರೋಪಿತರಾದ ನೀವು ತಡೆದು ನಿಲ್ಲಿಸಿದ ಕಾರಣ, ಭಾ.ದಂ.ಸಂ.ಕಲಂ. 341 ಸಹವಾಚಕ ಕಲಂ. 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ವಿದ್ಯಾಸಾಗರ 2 ನೇ ಆರೋಪಿ ಚಾಸಾ-4 ಶೇರ ಅಲಿ ನೇದ್ದವರಿಗೆ ಏ ಭೋಸಡಿ ಮಗನೇ ನೀ ಕೆಲಸ ನಿಲ್ಲಿಸು ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ. 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ವಿದ್ಯಾಸಾಗರ 2 ನೇ ಆರೋಪಿ ಚಾಸಾ-4 ಶೇರ ಅಲಿ ನೇದ್ದವರಿಗೆ ಕೈಯಿಂದ ಹೊಡೆದ ಕಾರಣ, ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ. 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-4 ನೇದ್ದವರಿಗೆ ಜಾಗಾ ಬಿಡಲ್ಲಾ ಅಂದರೆ ನಿನಗೆ ಖಲಾಸ ಮಾಡ್ತೀನಿ ಅಂತಾ ಜೀವ ಬೆದರಿಕೆ ಹಾಕಿದ ಕಾರಣ, ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ. 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕಃ 17-01-2024.

**(ಶ್ರೀ ರವಿಕುಮಾರ ವಿ.)**
ಪ್ರ.ದ.ನ್ಯಾ.ದಂಡಾಧಿಕಾರಿ, ಚಿಂಚೋಳಿ.